ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:45:ಯುಜಿಸಿ.ಬಾಕಿ.ನಿ.ಅ:ಆಯವ್ಯಯ:2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:12-03-2018

## ಸುತ್ತೋಲೆ

ವಿಷಯ ಯು.ಜಿ.ಸಿ. ಹಿಂಬಾಕಿ ಪಾವತಿ ಮಾಹಿತಿ ನೀಡುವಕುರಿತು.

ಉಲ್ಲೇಖ 1.ಸರ್ಕಾರದ ಆದೇಶ ಸಂಖ್ಯೆ:ಇಡಿ:37:ಯುಎನ್ಇ:2009 ದಿ:24.12.2009

2.ಸರ್ಕಾರದ ಪತ್ರ ಸಂಖ್ಯೆ:ಇಡಿ:37:ಯುಎನ್ಇ:2009 ದಿನಾಂಕ:8.4.2010

3.ಸರ್ಕಾರದ ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ

****

2006ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯು ಉಲ್ಲೇಖ(1)ರ ಸರ್ಕಾರದ ಆದೇಶದ ಪ್ರಕಾರ ದಿನಾಂಕ:01.01.2006 ರಿಂದ ಜಾರಿಗೆ ಬಂದಿದ್ದು, ಭತ್ಯೆಗಳಾದ, ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ ನಗರ ಪರಿಹಾರ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದ್ದು, ಈ ಕುರಿತು ಸದರಿ ಆದೇಶದ ಕಂಡಿಕೆ 10 ಮತ್ತು 11(b)ರಲ್ಲಿನ ಅಂಶಗಳಿಗೆ ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ಈ ಕೆಳಕಂಡಂತೆ ಸ್ಪಷ್ಟೀಕರಣಗಳನ್ನು ನೀಡಲಾಗಿರುತ್ತದೆ;

"The revised UGC pay scales are effective from:01.01.2006. All allowances such as DA, HRA, CCA and other benefits such as CAS, incentives, pensionary benefits etc., in the re vised scale is admissible from prospective effect from the date of issue of orders"

ಉಲ್ಲೇಖ(2)ರ ಸರ್ಕಾರದ ಸ್ಪಷ್ಟೀಕರಣದ ಪತ್ರವನ್ನು ಈ ಕಛೇಯಿಂದ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಹಾಗೂ ಸರ್ಕಾರಿ/ಖಾಸಗಿ ಅನುದಾನಿತ ಪದವಿ/ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ ಪರಿಚಲಸಲಾಗಿರುತ್ತದೆ.ಸರ್ಕಾರ/ಇಲಾಖೆಯು ಸ್ಪಷ್ಟ ನಿರ್ದೇಶನ ನೀಡಲಾಗಿದ್ದರು ಸಹ 2006ರ ಪರಿಷ್ಕೃತ ಯುಜಿಸಿ ಹಿಂಬಾಕಿ ಮೊತ್ತವನ್ನು ಪಾವತಿಸುವಾಗ ತುಟ್ಟಿಭತ್ಯೆಯನ್ನು ಒಳಗೊಂಡಂತೆ ಹಿಂಬಾಕಿಯನ್ನು ಪಾವತಿಸಿರುವುದು ತಿಳಿದು ಬಂದಿರುತ್ತದೆ. ಮಹಾಲೇಖಪಾಲರ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಸದರಿ ಪತ್ರದ ಸ್ಪಷ್ಟೀಕರಣಕ್ಕೆ ವಿರುದ್ಧವಾಗಿ ತುಟ್ಟಿಭತ್ಯೆಯೊಂದಿಗೆ ಯುಜಿಸಿ ಹಿಂಬಾಕಿ ಪಾವತಿಸಿರುವ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದ್ದು, ಸರ್ಕಾರದ ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿಯಲ್ಲಿ ಸರ್ಕಾರದ ನಿರ್ದೇಶನ ವಿರುದ್ಧ ತುಟ್ಟಿಭತ್ಯೆ/ಮನೆ ಬಾಡಿಗೆ ಭತ್ಯೆ/ನಗರ ಪರಿಹಾರ ಭತ್ಯೆ ಪಾವತಿಸಲು ಕಾರಣಕರ್ತರಾದವರ ವಿರುದ್ಧ ಕ್ರಮಜರುಗಿಸುವಂತೆ ತಿಳಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಯುಜಿಸಿ ಬಾಕಿ ಕುರಿತು ಪೂರ್ಣ ವಿವರದೊಂದಿಗೆ ವರದಿಯನ್ನು ಸರ್ಕಾರಕ್ಕೆ ತುರ್ತಾಗಿ ಸಲ್ಲಿಸಬೇಕಾಗಿರುವ ಪ್ರಯುಕ್ತ ಈ ಪತ್ರದೊಂದಿಗೆ ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು 01.01.2006ರ ಪೂರ್ವದಲ್ಲಿ ನೇಮಕಾತಿ/ಸಕ್ರಮಾತಿ ಹೊಂದಿರುವ ಮತ್ತು ದಿನಾಂಕ:01.01.2006 ಮತ್ತು ನಂತರ ನೇಮಕಾತಿ /ಸೇವಾ ಸಕ್ರಮಾತಿ ಹೊಂದಿರುವ ಬೋಧಕರ ವಿವರವನ್ನು ಪ್ರತ್ಯೇಕವಾಗಿ ದಿನಾಂಕ:15.03.2018ರೊಳಗೆ ಸಲ್ಲಿಸಲು ಹಾಗೂ ಇದರ ಸಾಫ್ಟ್ ಪ್ರತಿಯನ್ನು ಇ-ಮೇಲ್ ವಿಳಾಸ dce.2006ugc@gmail.com ಗೆ ಸಲ್ಲಿಸಲು ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿಯನ್ನು:

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ& ಕಲಬುರಗಿ
2. ಮಾಹಿತಿ ಅಧಿಕಾರಿಗಳು- ಮಾಹಿತಿ ವಿಭಾಗ ಕೇಂದ್ರ ಕಛೇರಿ ಬೆಂಗಳೂರು-ಮೇಲ್ಕಂಡ ಸುತ್ತೋಲೆಯನ್ನು ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು-ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ.

## STATEMENT SHOWING DETAILS OF UGC ARRERS TO BE PAID, ALREDY PAY AND BALANCE TO BE PAID

Appointed prior to 01.01.2006

| SL No | Name of the College | Name of the Staff | PERIOD FROM 01.01.2006 TO 23.12.2009 | | | | | |
|---|---|---|---|---|---|---|---|---|
| | | | Total UGC arrears to be Paid Including D.A. | Total UGC arrears to be paid Excluding D.A. | Total UGC arrears already paid including D.A. | Amount arrived after excluding D.A. from ugc amount already paid | Balance UGC arreas to be paid including D.A. | Balance UGC arrears to be paid excluding D.A. |
| 1 | 2 | 3 | 4 | 5 | 6 | 7 | 8(4-6) | 9(5-6) |
| | | | | | | | | |
| | | | | | | | | |

## STATEMENT SHOWING DETAILS OF UGC ARRERS TO BE PAID, ALREDY PAY AND BALANCE TO BE PAID

Appointed After 01.01.2006& onwards

| SL No | Name of the College | Name of the Staff | PERIOD FROM 01.01.2006 TO 23.12.2009 | | | | | |
|---|---|---|---|---|---|---|---|---|
| | | | Total UGC arrears to be Paid Including D.A. | Total UGC arrears to be paid Excluding D.A. | Total UGC arrears already paid including D.A. | Amount arrived after excluding D.A. from ugc amount already paid | Balance UGC arreas to be paid including D.A. | Balance UGC arrears to be paid excluding D.A. |
| 1 | 2 | 3 | 4 | 5 | 6 | 7 | 8(4-6) | 9(5-6) |
| | | | | | | | | |
| | | | | | | | | |

ವಿ.ಸೂ:

1. ಯೋಜನೆ ಕಾಲೇಜಿನ ಬೋಧಕರಿಗೆ ಸಂಬಂಧಿಸಿದಂತೆ ಈಗಾಗಲೇ ಯುಜಿಸಿ. ಬಾಕಿ ಪೂರ್ಣವಾಗಿ ಪಾವತಿಯಾಗಿದ್ದರು ಸಹ ಮೇಲ್ಕಂಡ ನಮೂನೆಯಲ್ಲಿ ಮಾಹಿತಿಯನ್ನುತಪ್ಪದೇ ಸಲ್ಲಿಸತಕ್ಕದ್ದು.
2. ಯಾವುದೇ ಕಾಲೇಜಿನಲ್ಲಿ ಯುಜಿಸಿ ಬಾಕಿ ಪಾವತಿಯಾಗಿರದಿದ್ದಲ್ಲಿ ಶೂನ್ಯ ವರದಿಯನ್ನು ತಪ್ಪದೇ ಸಲ್ಲಿಸತಕ್ಕದ್ದು.
3. ಈಗಾಗಲೇ ನಿವೃತ್ತಿ ಹೊಂದಿರುವ ಬೋಧಕರುಗಳಿಗೆ ಯುಜಿಸಿ ಬಾಕಿ ಪಾವತಿಗೆ ಸಂಬಂಧಿಸಿದಂತೆ ಮೇಲ್ಕಂಡ ನಮೂನೆಯಲ್ಲಿ ಮಾಹಿತಿಯನ್ನು ತಪ್ಪದೇ ಸಲ್ಲಿಸತಕ್ಕದ್ದು.